<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಮುಂದುವರಿದ ಪಾಟೀ ಸವಾಲುಃ-</u> ಶ್ರೀ. ಎಸ್.ಪಿ. ವಕೀಲರಿಂದ ಪ್ರತಿವಾದಿಯರ ಪರವಾಗಿ

27. ಎಸ್.ಎನ್.ಡಿ.ಪಿ. ಮತ್ತು ಬಿಲ್ಲವ ಎಂಬ ಎರಡು ಜನಾಂಗ ಒಂದೇ ಅಂದರೆ ಸರಿ. ಮಲೆಯಾಳಂ ಭಾಷೆಯನ್ನು ಮಾತನಾಡುವವರು ಎಸ್.ಎನ್.ಡಿ.ಪಿ. ಎಂದು ಕರೆಯುತ್ತಾರೆ ಮತ್ತು ತುಳು ಭಾಷೆಯನ್ನು ಮಾತನಾಡುವವರು ಬಿಲ್ಲವ ಎಯಿ ಕರೆಯುತ್ತಾರೆ ಎಂದರೆ ಸಾಕ್ಷಿಯು ಎರಡು ಪಂಗಡದಲ್ಲಿ ಎರಡು ಭಾಷೆ ಮಾತನಾಡುವವರು ಇದ್ದಾರೆ ಎಂದು ಹೇಳುತ್ತಾರೆ. ನನ್ನ ದೊಡ್ಡಪ್ಪನ ಹೆಸರು ಬಾಸ್ಕರನ್ ಎಂದರೆ ಸರಿ. ಅವರಿಗೆ ಹೆಣ್ಣುಮಕ್ಕಳು ಇರುವುದು ನನಗೆ ಗೊತ್ತು. ಆದರೆ ಅವರ ಒಬ್ಬ ಮಗಳ ಹೆಸರು ಮಲ್ಲಿಕಾ ಎಂದರೆ ನನಗೆ ಗೊತ್ತಿಲ್ಲ. ಬಾಸ್ಕರರವರ ಮಕ್ಕಳ ಪೈಕಿ ಒಬ್ಬ ಹೆಣ್ಣುಮಗಳನ್ನು ಚಾರ್ಮಾಡಿ ಗ್ರಾಮಕ್ಕೆ ಮದುವೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪನಾದ ಬಾಸ್ಕರರವರ ಮಗಳು ಮಲ್ಲಿಕಾರವರನ್ನು ಚಾರ್ಮಾಡಿ ಗ್ರಾಮದ ಗೋಪಾಲನ್‌ರವರ ಮಗ ನಾರಾಯಣ ರವರಿಗೆ ಕೊಟ್ಟು ಮದುವೆ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ವಾದಿಯವರ ಗಂಡ ಮತ್ತು ಸದರಿ ನಾರಾಯಣ ಅಣ್ಣತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ.

28. ಬಾಸ್ಕರ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ನನ್ನ ಚಿಕ್ಕಪ್ಪನಾದ ಗಂಗಾಧರ ರವರಿಗೆ ಎರಡರಿಂದ ಮೂರು ಮಕ್ಕಳು ಇರಬಹುದು ಆದರೆ ನಿಖರವಾಗಿ ಗೊತ್ತಿಲ್ಲ. ಚಿಕ್ಕಪ್ಪನಾದ ಗಂಗಾಧರ ರವರಿಗೆ ವಿಜಯನ್ ಎಂಬ ಮಗ ಇರುವ ವಿಚಾರ ನನಗೆ ಗೊತ್ತಿಲ್ಲ. ನಮ್ಮಲ್ಲಿ ಭೂತ ಕೊಲಗಳಿಗೆ ಚಿಕ್ಕಪ್ಪ ಮತ್ತು ದೊಡ್ಡಪ್ಪನ ಕುಟುಂಬ ಸೇರಿ ಕಾರ್ಯಕ್ರಮ ಮಾಡುವ ಪದ್ಧತಿ ಇರುವುದಿಲ್ಲ. ಅದೇ ರೀತಿ ಮದುವೆ ಮತ್ತು ಇತರೆ ಕಾರ್ಯಕ್ರಮಗಳಿಗೆ ಚಿಕ್ಕಪ್ಪ ಮತ್ತು ದೊಡ್ಡಪ್ಪನ ಕುಟುಂಬದವರು ಕರೆದರೆ ಬರುತ್ತಾರೆ ಆದರೆ ಕರೆಯುವುದು ಬಹಳ ಕಮ್ಮಿ. ವಾದಿ, ಆಕೆಯ ತಾಯಿ, ಮಕ್ಕಳು ಮತ್ತು ತಂದೆ ನನಗೆ ಪರಿಚಯ ಇರುವುದಿಲ್ಲ. ಆ ಕಾರಣದಿಂದ ಪರಿಚಯ ಇಲ್ಲದವರನ್ನು ನಮ್ಮ ಮನೆಯ ಕಾರ್ಯಕ್ರಮಕ್ಕೆ ನಾವು ಕರೆಯುವುದಿಲ್ಲ.

29. ನನ್ನ ಮಗನಿಗೆ ಒಂದು ವರ್ಷಗಳ ಹಿಂದೆ ಮದುವೆ ಆಗಿದೆ. ಸದರಿ ಕಾರ್ಯಕ್ರಮಕ್ಕೆ ವಾದಿ, ಆಕೆಯ ಮಕ್ಕಳು, ತಂದೆ ಮತ್ತು ತಾಯಿ ಬಂದಿರುವುದಿಲ್ಲ. ನಮ್ಮ ತಂದೆ ಮೃತ ಪಡುವ ಮೊದಲು 7-8 ವರ್ಷಗಳ ಹಿಂದಿನಿಂದ ಮನೆಯಿಂದ ಹೊರಗೆ ಹೋಗುತ್ತಿರಲಿಲ್ಲ. ನಮ್ಮ ತಂದೆಗೂ ಸಹಃ ವಾದಿ, ಆಕೆಯ ಮಕ್ಕಳು, ತಂದೆ ಮತ್ತು ತಾಯಿ ಪರಿಚಯ ಇರಲಿಲಲ್ಲ. ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಅದನ್ನು ಗುರುತಿಸಿರುತ್ತಾರೆ. ಅದನ್ನು ನಿಪಿ 7 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಪೋಟೋವನ್ನು ತೋರಿಸಿ ಅದರಲ್ಲಿ ನಿಮ್ಮ ತಂದೆ ಕಂಡು ಬರುತ್ತಾರಾ ಎಂದರೆ ಸಾಕ್ಷಿಯು ಸರಿಯಾಗಿ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ಪೋಟೋ ತೋರಿಸಿ ಅದರಲ್ಲಿರುವ ವ್ಯಕ್ತಿ ವಾದಿ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಮತ್ತೊಂದು ಪೋಟೋ ತೋರಿಸಿ ಅದರಲ್ಲಿ ನಾನು ಮತ್ತು ನನ್ನ ಮಗಳ ಪೋಟೋ ಕಂಡು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮತ್ತೇರೆಡು ಪೋಟೋಗಳನ್ನು ತೋರಿಸಲಾಗಿ ಅವುಗಳನ್ನು ಗುರುತಿಸಿರುವುದಿಲ್ಲ. ನನಗೆ ತೋರಿಸಿದ ಪೊಟೋಗಳಲ್ಲಿ ನಾನು, ನನ್ನ ಮಗ, ನನ್ನ ತಂದೆ ಮತ್ತು ವಾದಿ ಮತ್ತು ಮಕ್ಕಳು ಕಂಡು ಬಂದರು ಸಹಃ ನಾನು ಉದ್ದೇಶ ಪೂರಕವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

30. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಅದರಲ್ಲಿ ನಿಮ್ಮ ಅಣ್ಣ ಕಂಡು ಬರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ನನಗೆ ಅರ್ಜುನ ಎಂಬ ಚಿಕ್ಕಪ್ಪ ಇದ್ದಾರೆ ಎಂದರೆ ಸರಿ. ಅವರ ಮನೆಯಲ್ಲಿ ಭೂತ ಕೂಲ ಮಾಡುವಾಗ ಕಳಸವನ್ನು ತುಂಬಿಸುವ ಪದ್ದತಿ ಇದೆಯೋ ಇಲ್ಲವೋ ನನಗೆ ಗೂತ್ತಿಲ್ಲ ಏಕೆಂದರೆ ನಾನು ಆ ಕಾರ್ಯಕ್ರಮಕ್ಕೆ ಹೋಗಿರುವುದಿಲ್ಲ. ನಮ್ಮ ತಂದೆ ತಾಯಿಗೆ ಒಟ್ಟು ಇಬ್ಬರು ಮಕ್ಕಳು. ನನಗೆ ಪ್ರಕಾಶನ್ ಎಂಬ ತಮ್ಮ ಇದ್ದು, ಅವರು ತಮ್ಮ 18 ನೇ ವಯಸ್ಸಿಗೆ ಮೃತ ಪಟ್ಟಿದ್ದಾರೆ ಎಂದರೆ ಸರಿಯಲ್ಲ. ನನಗೆ ಲೀಲಾ ಎಂಬ ಸಹೋದರಿ ಇದ್ದು, ಆಕೆ 7 ವರ್ಷ ಪ್ರಾಯ ಇರುವಾಗ ಮೃತ ಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

31. ನನ್ನ ತಾಯಿ ಅನಾರೋಗ್ಯದಿಂದ ಮೃತ ಪಟ್ಟರು ಆದರೆ ನಿಖರವಾದ

ಕಾಯಿಲೆ ಯಾವುದು ಎಂದು 33 ವರ್ಷ ಆದ ಕಾರಣ ನನಗೆ ನೆನಪಿಲ್ಲ. ನನ್ನ ಪತ್ನಿ ಮೃತ ಪಟ್ಟಿದ್ದು ಆಕೆಯ ಕಾರ್ಯಕ್ರಮಕ್ಕೆ ವಾದಿ ಬಂದಿರುವುದಿಲ್ಲ. ನನ್ನ ಅಣ್ಣನ ಪತ್ನಿ ಮೃತ ಪಟ್ಟಿದ್ದು, ಸದರಿ ಕಾರ್ಯಕ್ರಮಕ್ಕೆ ವಾದಿ ಬಂದಿದ್ದಾರೋ ಇಲ್ಲವೋ ನೆನಪಿಲ್ಲ. ರವಿ ಅವರ ಮಕ್ಕಳ ಹೆಸರು ವಿಜೀತಾ, ನನ್ನ ಮಗಳ ಹೆಸರು ಶೃತಿ. ನನ್ನ ಮಗಳು ಪುತ್ತಿಲ ಹಾಸ್ಟೇಲನಲ್ಲಿ ವಿದ್ಯಾಭ್ಯಾಸ ಪಡೆದಿರುವುದಿಲ್ಲ. ಆದರೆ ವಿಜೀತಾರವರು ಸದರಿ ಹಾಸ್ಟೇಲನಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಚಿಕ್ಕವನಿರುವಾಗ ನಮ್ಮ ತಂದೆಯ ಪಡಿತರ ಚೀಟಿಯಲ್ಲಿ ನನ್ನ ತಂದೆ, ತಾಯಿ, ನನ್ನ ಹಾಗೂ ನನ್ನ ಅಣ್ಣ ಹೆಸರು ಮಾತ್ರ ಇತ್ತು. ಸದರಿ ಪಡಿತರ ಚೀಟಿಯಲ್ಲಿ ವಾದಿಯ ಹೆಸರು ಸಹಃ ಇತ್ತು, ಆದರೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ನನ್ನ ತಂದೆ ತಾಯಿಯ ಕಟುಂಬದ ಸದಸ್ಯರಾಗಿದ್ದರು ಎಂದರೆ ಸರಿಯಲ್ಲ. ಆ ಸಂಬಂಧ, ಸಂಬಂಧಪಟ್ಟ ಇಲಾಖೆಯವರವನ್ನು ನ್ಯಾಯಾಲಯಕ್ಕೆ ಕರೆಯಿಸಿ, ಸಾಕ್ಷ್ಯ ನುಡಿಸಲು ನನ್ನ ಅಭ್ಯಂತರ ಇರುವುದಿಲ್ಲ.

32. ನಾನು ಆರನೇ ತರಗತಿಯವರೆಗೆ ಮಿಯಾರ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ.

33. ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಕಾಲವಾಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ.